

# ಮೆಥಡ್ ಆ್ಯಕ್ಟರ್‌ನ 'ಎಕ್ಸ್' ಫ್ಯಾಕ್ಟರ್

■ ವಿಶಾಖ ಎನ್.

ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೊದಲ್ಲಿ 'ಆಗ್ ಕಾ ದರಿಯಾ' ಹಿಂದಿ ಸಿನಿಮಾ ಚಿತ್ರೀಕರಣ. ನಿರ್ದೇಶಕನ ಕುರ್ಚಿ ಮೇಲೆ ರಾಜೇಂದ್ರ ಸಿಂಗ್ ಬಾಬು. ಅಭಿನಯಿಸಲು ಎದುರಲ್ಲಿ ಬಣ್ಣ ಹಚ್ಚಿದ್ದವರು ದಿಲೀಪ್ ಕುಮಾರ್. ಆ ದಿನ ಊಟದ ವಿರಾಮ ಕೂಡ ಇರಲಿಲ್ಲ. ಎಲ್ಲರಿಗೂ ಸ್ಯಾಂಡ್‌ವಿಚ್ ತರಿಸಿಕೊಟ್ಟು, ಬಿಡುವಿಲ್ಲದಂತೆ ಚಿತ್ರೀಕರಣ ಮುಗಿಸುವುದರಲ್ಲಿದ್ದರು. ತಮ್ಮ ಕುರ್ಚಿಯ ಹಿಂದೆ ಯಾರೋ ನಿಂತಂತೆ ಸಿಂಗ್ ಬಾಬು ಅವರಿಗೆ ಭಾಸವಾಯಿತು. ತಿರುಗಿ ನೋಡಿದರೆ, ರಾಜ್‌ಕುಮಾರ್. ತಮ್ಮ ಮಗ ಪುನೀತ್ ಸಹಿತ ಮೇರುನಟ ಹೇಗೆ ಅಭಿನಯಿಸುತ್ತಾರೆ ಎನ್ನುವುದನ್ನು ನೋಡಲು ಅಲ್ಲಿ ಸ್ವಪ್ರೇರಣೆಯಿಂದ ಹೋಗಿದ್ದರು. ಎಲ್ಲರೂ ಸೇರಿ ಮಧ್ಯಾಹ್ನ ಒಟ್ಟಿಗೆ ಊಟ ಮಾಡಬಹುದು ಎಂದು ರಾಜೇಂದ್ರ ಸಿಂಗ್ ಬಾಬು ಬುಲಾವು ಕೊಟ್ಟಿದ್ದರು. ತಾವು ಬರುವ ವಿಚಾರವನ್ನು ದಿಲೀಪ್ ಕುಮಾರ್ ಅವರಿಗೆ ತಿಳಿಸಕೂಡದು ಎಂದು ರಾಜ್‌ಕುಮಾರ್ ಮೊದಲೇ ಹೇಳಿದ್ದರು. ಸಂಜೆ ಎಲ್ಲರೂ ಕಲೆತ ಆ ಸಂದರ್ಭದ ಒಂದು ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ರಾಜೇಂದ್ರಸಿಂಗ್ ಬಾಬು ಹಾಕಿಕೊಂಡಿದ್ದರು. ದಿಲೀಪ್ ಕುಮಾರ್ ಇನ್ನಿಲ್ಲವಾದ ಈ ಸಂದರ್ಭದಲ್ಲಿ ಅವರ ಅಭಿನಯವನ್ನು ಕಣ್ತುಂಬಿಕೊಳ್ಳಲು ಮೇರುನಟ ರಾಜ್‌ಕುಮಾರ್ ಹಾಗೆ ಹೋಗಿದ್ದೇ ಗಟ್ಟಿತನದ ಬಂಧವನ್ನು ಸಾರುತ್ತದೆ.

ಪಾಕಿಸ್ತಾನದ ಪೆಶಾವರದಿಂದ ಅಪ್ಪನ ಮೇಲೆ ಮುನಿಸಿಕೊಂಡು ಬಂದು, ಪುಣೆಯಲ್ಲಿ ಮಿಲಿಟರಿ ಕ್ಯಾಂಟೀನ್‌ನಲ್ಲಿ ಸ್ಯಾಂಡ್‌ವಿಚ್ ಮಾಡುತ್ತಾ ಇದ್ದ, ಅಲ್ಲೇ ಪಕ್ಕದಲ್ಲಿ ಹಣ್ಣಿನ ಅಂಗಡಿಯನ್ನೂ ಇಟ್ಟುಕೊಂಡಿದ್ದ ಯೂಸುಫ್ ಖಾನ್ ಬದುಕೇ ಸಿನಿಮೀಯ. ದೇವಿಕಾರಾಣಿ ಕಣ್ಣಿಗೆ ಬಿದ್ದ ಅವರು, ಬದುಕಿಗೆ ಒಂದು ಕೆಲಸ ಎಂದಷ್ಟೆ ಸಿನಿಮಾ ನಟನೆಗೆ ಒಪ್ಪಿದ್ದು. ಅದಕ್ಕೂ ಮೊದಲು ಒಂದೇ ಒಂದು ದೇಶಭಕ್ತಿಯ ಸಿನಿಮಾವನ್ನು ಮಾತ್ರ ಅವರು ನೋಡಿದ್ದದ್ದು.

'ಮೆಥಡ್ ಆ್ಯಕ್ಟಿಂಗ್'ಗೆ ಉದಾಹರಣೆಯಾಗಿ ಮರ್ಲಾನ್ ಬ್ರಾಂಡೊ ಅವರನ್ನು ಹೆಸರಿಸುತ್ತಾರೆ. ಅಂತೆಯೇ ದಿಲೀಪ್ ಕುಮಾರ್. ವೈಧಾನಿಕ ಅಭಿನಯ ಎಂದು ಇದನ್ನು ಅನುವಾದಿಸಬಹುದಾದರೂ, ಅದು ಪಕ್ಕಾ ಅರ್ಥವನ್ನು ನೀಡುವುದಿಲ್ಲ. ಪಾತ್ರವೊಂದರ ಒಳತೋಟಿಗಳನ್ನು ಪರಿಭಾವಿಸಿಕೊಂಡು, ಅದಕ್ಕೆ ಸಾಕಷ್ಟು ಹೋಂವರ್ಕ್ ಮಾಡಿ ಭಾವಗಳನ್ನು ತುಳುಕಿಸುವ ಅಭಿನಯದ ಮಾದರಿ ಇದು. ದಿಲೀಪ್ ಅಭಿನಯದಲ್ಲೂ ತೋರಿದ್ದು ವೃತ್ತಿಶ್ರದ್ಧೆಯನ್ನೇ. ಯಾಕೆಂದರೆ, ತಮ್ಮ ಮುಸ್ಲಿಂ ಹೆಸರನ್ನು ಜನಪ್ರಿಯತೆಗಾಗಿ ಹಿಂದೂ ಹೆಸರಾಗಿ ದೇವಿಕಾ ಅವರು ಬದಲಿಸಿದ್ದನ್ನೂ ಕಣ್ಣಿಗೊತ್ತಿಕೊಂಡರು. ಮೇಲಿಂದ ಮೇಲೆ ದುರಂತ ನಾಯಕನ ಪಾತ್ರಗಳು ಹುಡುಕಿಕೊಂಡು ಬಂದಾಗಲೂ ಒಲ್ಲೆ ಎನ್ನಲಿಲ್ಲ. ಅದು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಮನೋವೈದ್ಯರು ಹೇಳಿದ ನಂತರ ಅವರು ಶುಭಂ ಎನ್ನಬಹುದಾದ ಕಥಾಭಿತ್ತಿಯ ಸಿನಿಮಾಗಳ ನಟನೆಗೆ ತೆರೆದುಕೊಂಡರು. ತಾವೇ ಚಿತ್ರಕಥೆಯನ್ನು ಸೂಕ್ಷ್ಮವಾಗಿ ಓದಿ, ಕೇಳಿಸಿಕೊಂಡು, ಪಾತ್ರದ ಪದರಗಳನ್ನು ಅರ್ಥೈಸಿಕೊಂಡು, ಅದಕ್ಕೆ ತಮ್ಮದೇ ಶೈಲಿಯನ್ನು ಅಳವಡಿಸುತ್ತಿದ್ದುದೇ ತಮ್ಮ ಮೆಥಡ್ ಎಂದು ದಿಲೀಪ್ ಆತ್ಮಕಥೆಯಲ್ಲಿ ಬರೆದುಕೊಂಡಿದ್ದಾರೆ. ಕೆಲವು ಸ್ಕ್ರಿಪ್ಟ್‌ಗಳನ್ನು ಒಪ್ಪಲು ಅವರು ತಿಂಗಳುಗಟ್ಟಲೆ ತೆಗೆದುಕೊಳ್ಳುತ್ತಿದ್ದರಂತೆ.

ಮಧುಬಾಲಾ, ಮೀನಾಕುಮಾರಿ, ಕಾಮಿನಿ ಕೌಶಲ್, ನರ್ಗಿಸ್, ವೈಜಯಂತಿಮಾಲಾ... ಹೀಗೆ ಹಿಂದಿ ಚಿತ್ರರಂಗದ ಭಿನ್ನ ಸುಂದರಿಯರ, ಪ್ರತಿಭಾವತಿಯರ ಜೋಡಿ ನಟಿಸಿಯೂ ದಿಲೀಪ್ ತಮ್ಮ ರುಜು ಹಾಕಿದರು. ರಾಜೇಶ್ ಖನ್ನಾ ಸೂಪರ್ ಸ್ಟಾರ್ ಆದಮೇಲೆ, ಅಮಿತಾಭ್ ಬಚ್ಚನ್ ಆ್ಯಂಗ್ರಿ ಯಂಗ್ ಮ್ಯಾನ್ ಆಗಿ ಜನಪ್ರಿಯವಾದ ಮೇಲೆ ತಮ್ಮ ಮಾರುಕಟ್ಟೆ ಅಲ್ಲಾಡಿದರೂ ಅವರು ಅಭಿನಯಕ್ಕೆ ಪೂರ್ಣವಿರಾಮ ಹಾಕಲಿಲ್ಲ. ಐದು ವರ್ಷಗಳ ಅಂತರದ ನಂತರ 'ಕ್ರಾಂತಿ' ತರಹದ ಚಿತ್ರದ ಮೂಲಕ ಅಚ್ಚರಿಯನ್ನೊಡ್ಡಿದರು. ವಯಸ್ಸಾದಂತೆ 'ಸೌದಾಗರ್' ತರಹದ ಸಿನಿಮಾದಲ್ಲಿ ಪೋಷಕ ಪಾತ್ರಕ್ಕೂ ಸೈ ಎಂದರು.

ಜುಗ್ನೂ, ಶಹೀದ್, ಅಂದಾಜ್, ಆನ್, ದೇವದಾಸ್, ನಯಾ ದೌರ್, ಮುಘಲ್–ಎ–ಆಜಮ್, ಗಂಗಾ ಜಮುನಾ, ಕ್ರಾಂತಿ, ಸೌದಾಗರ್ ಇವೆಲ್ಲವೂ ದಿಲೀಪ್ ಅಭಿನಯದ ನೋಡಲೇಬೇಕಾದ ಚಿತ್ರಗಳು. 'ರಾಮ್ ಔರ್ ಶ್ಯಾಮ್' ಮೂಲಕ ದ್ವಿಪಾತ್ರದ ಮನರಂಜನೆಯ ಮಾದರಿ ಸೃಷ್ಟಿಸಿದ, ಮೊಘಲ್–ಎ–ಆಜಮ್‌ನಂಥ ನಾಟಕೀಯ ಪಾತ್ರಗಳಿಗೂ ತಮ್ಮದೇ ಅಭಿನಯಗಂಧ ಸವರಿದ, ಬೇರೆ ಬೇರೆ 'ಜಾನರ್'ಗಳಿಗೆ ಒಡ್ಡಿಕೊಂಡ ಅವರನ್ನು ರಿಯಲಿಸ್ಟಿಕ್ ನಟ ಎಂದೇ ಸಿನಿಮಾ ವೈಯಾಕರಣಿಗಳು ಗುರುತಿಸುತ್ತಾರೆ.

ಕೊಹಿನೂರ್ ಸಿನಿಮಾಗೆ ಸಿತಾರ್ ನುಡಿಸುವುದನ್ನು ಅವರು ಕಲಿತಿದ್ದರು. 'ಗಂಗಾ ಜಮುನಾ' ಚಿತ್ರದಲ್ಲಿ ಕೊನೆಯಲ್ಲಿ ಮರಣಹೊಂದುವ ದೃಶ್ಯ ಅಭಿನಯಿಸುವ ಮೊದಲು ಸ್ಟುಡಿಯೊದಲ್ಲಿ ಮುಖವೆಲ್ಲ ಬಾಡುವಷ್ಟು ಓಡಿ ದಣಿದಿದ್ದರು. 'ಶಕ್ತಿ', 'ಮಶಾಲ್' ಚಿತ್ರಗಳಲ್ಲಿ ಅಂತರಂಗದ ನೋವು ತುಳುಕಿಸಬೇಕಾದಾಗ, ತನ್ನ ಸಹೋದರ ಮೃತಪಟ್ಟಾಗ ತಂದೆಯ ಮೊಗದಲ್ಲಿದ್ದ ಸಂಕಟವನ್ನು ಸ್ಮರಿಸಿಕೊಂಡು ಅದೇ ಭಾವವನ್ನು ಮರುಸೃಷ್ಟಿಸಿದ್ದರು. ಇಂತಹ ಉತ್ಕಟತೆಯೇ ಅವರನ್ನು 'ಮೆಥಡ್ ಆ್ಯಕ್ಟರ್' ಆಗಿ ಮಾಡಿದ್ದು.

ದಿಲೀಪ್ ಅವರಿಗೆ ದುಪ್ಪಟ್ಟು ಚಿಕ್ಕ ವಯಸ್ಸಿನ ಸಾಯಿರಾ ಬಾನು ಪತ್ನಿಯಾದರು. ಕೊನೆಯವರೆಗೂ ಹೂವಿನಂತೆ ನೋಡಿಕೊಂಡರು. ತಮಗೆ ಒಂದು ಗರ್ಭಪಾತವಾಗಿ, ಮಗುವೇ ಆಗುವುದಿಲ್ಲ ಎಂದಾಗ ನೋವು ನುಂಗಿಕೊಂಡರು. ಇವೆಲ್ಲವನ್ನೂ ಕಂಡುಂಡ ಮೇಲೆ 94ನೇ ಹುಟ್ಟುಹಬ್ಬವನ್ನು ಆಸ್ಪತ್ರೆಯಲ್ಲೇ ಆಚರಿಸಿಕೊಂಡಿದ್ದ ದಿಲೀಪ್ ಮನಸ್ಸು ಆರೋಗ್ಯ ಒಡ್ಡಿದ ಸಮಸ್ಯೆಗಳನ್ನೂ ಜೀರ್ಣಿಸಿಕೊಳ್ಳುವಷ್ಟು ಗಟ್ಟಿಯಾಗಿತ್ತು.

'ದಿಲೀಪ್ ಸಾಬ್ ಚೆನ್ನಾಗಿ ಅಡುಗೆ ಮಾಡುತ್ತಿದ್ದರು. ಅವರದ್ದೇ ಸಿಗ್ನೇಚರ್ ಡಿಷ್‌ಗಳಿದ್ದವು. ಅವುಗಳ ಸವಿಯುಣ್ಣಲು ನಾನು ಅವರಿಗೆ ಹತ್ತಿರವಾದೆ. ನಾವು ಖಾದ್ಯಗಳ ವಿಷಯವನ್ನೇ ಹೆಚ್ಚು ಮಾತನಾಡುತ್ತಿದ್ದದ್ದು' ಎಂದು ನಿರ್ದೇಶಕ ಯಶ್ ಚೋಪ್ರಾ ಹಿಂದೊಮ್ಮೆ ನೆನಪಿಸಿಕೊಂಡಿದ್ದರು.

ಅವರನ್ನು ಅನುಕರಿಸಲು ಯತ್ನಿಸಿ ತಾವೂ ಸೋತದ್ದಾಗಿ ಹೇಳಿಕೊಂಡ ಶಾರುಖ್ ಖಾನ್, ಈ ನಟನ ತನ್ನತನ ಎಂಥದೆನ್ನುವುದಕ್ಕೆ ಅಡಿಗೆರೆ ಎಳೆದಿದ್ದಾರೆ. ಅದು ಚಿರಸ್ಥಾಯಿ. ■